ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಂಟೀ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 1996ರ ಮಾರ್ಚ್ ತಿಂಗಳ ಅಂತ್ಯದವರೆಗೆ ವಿಸ್ತರಣೆ.

ಡಾ॥ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಗ್ರಾನೈಟ್ ಪ್ರಕರಣ ಸಂಬಂಧಿಸಿದಂತೆ, ಸಮಗ್ರವಾದ ತನಿಖೆ ನಡೆಸಿ ಸದನಕ್ಕೆ ವರದಿಯನ್ನು ಸಲ್ಲಿಸಲು ನೇಮಿಸಿದ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 1996ರ ಮಾರ್ಚ ತಿಂಗಳ ಅಂತ್ಯದವರೆಗೆ ಕಾಲಾವಕಾಶ ವಿಸ್ತರಿಸಬೇಕೆಂದು ಕೋರಿದೆ.

ಅಧ್ಯಕ್ಷರು : ಅವಧಿಯನ್ನು ವಿಸ್ತರಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಬಹಳ ದಿವಸ ಆಗುತ್ತಿದೆ. ನನಗೆ ಏನೂ ಪ್ರಶ್ನೆ ಮಾಡಬೇಕೆಂದು ಅಲ್ಲ. ತಾವು ಸಮಿತಿ ರಚನೆ ಮಾಡಿ ಕೇವಲ 8 ದಿವಸದಲ್ಲಿ ವರದಿ ಕೊಡಬೇಕೆಂದು ಹೇಳಿ ಜಂಟಿ ಸದನ ಸಮಿತಿ ರಿಪೋರ್ಟ್ ಗ್ರಾನೈಟ್ ಮೇಲೆ ಒಂದು ವರದಿ ಕೊಡಬೇಕು ಎನ್ನತಕ್ಕಂಥದ್ದದ್ದು ಪ್ರಾರಂಭದಲ್ಲಿತ್ತು. ಆ ಮೇಲೆ ಒಂದು ತಿಂಗಳವರೆಗೆ ಹೋಯಿತು. ಆದರೆ ಅವರು ಪುನಃ ಮಾರ್ಚ ಎಂಡರವರೆಗೆ ಅಂದರೆ ಬಹಳ ದಿವಸವಾಗುತ್ತಿದೆ. ಏಕೆಂದರೆ ನಾವು ಪ್ರೆಸನಲ್ಲಿ ನೋಡುತ್ತಿದ್ದೇವೆ. ಅಲ್ಲಿ ಏನು ನಡೆದಿದೆ, ಅದು ಗೊತ್ತಿಲ್ಲ. ಪ್ರೆಸನಲ್ಲಿ ನೋಡಿದಾಗ ಭಿನ್ನಾಭಿಪ್ರಾಯ ಇದೆ. ಒಬ್ಬರಿಗೋಸ್ಕರ ಹೊಂದಾಣಿಕೆ ಇಲ್ಲ, ಅಥವಾ ಕೌಂಟರ್ ಅಲಿಗೇಷನ್ ಮೆಂಬರ್ಸ ಮಾಡುತ್ತಿದ್ದಾರೆ. ಎನ್ನತಕ್ಕಂಥದ್ದು ಬರುತ್ತಿದೆ. ಅದಕ್ಕಾಗಿ ನೀವು ಯಾವ ರೀತಿಯಾಗಿ ಬಗೆಹರಿಸುತ್ತೀರಿ ಎನ್ನತಕ್ಕಂಥದ್ದು ಸ್ವಲ್ಪ ತಾವು ಹೇಳಬೇಕು.

11.00 ಎ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸುದೀರ್ಘವಾಗಿ ಚರ್ಚೆಯಾಗಿ, ಅದಕ್ಕೆ ಪರಿಹಾರ ಸಿಗಬಹುದು ಎಂದು ನಾವು ಸದನದ ಸಮಿತಿಯನ್ನು ಮಾಡಿದ್ದೇವೆ. ಆದರೆ ಪತ್ರಿಕೆಯಲ್ಲಿ ನಾವು ನೋಡಿದಾಗ, ವರದಿಯನ್ನು ನೋಡಿದಾಗ ಅದರ ಉದ್ದೇಶವೇ ಸಫಲ ಆಗಲಿಲ್ಲವೇನೋ ಎನ್ನುವಂಥ ಭಾವನೆ ಜನರಲ್ಲಿ ಮೂಡುವ ಪರಿಸ್ಥಿತಿ ಬಂದಿದೆ. ಈಗ ಅವಧಿಯೇನೋ ವಿಸ್ತರಣೆಯಾಗಿದೆ. ತಾವು ಸದನದ ಸಮಿತಿಯನ್ನು ಮಾಡಿದಂಥವರು ಆದಕಾರಣ ತಾವು ದಯವಿಟ್ಟು ಅದನ್ನು ತರಿಸಿ ನೋಡಿದರೆ ಬಹುಶಃ ಅದರ ಉದ್ದೇಶ ಸಫಲವಾಗುವಂತೆ ಆಗುತ್ತದೆ. ಇಲ್ಲದೇಹೋದರೆ ಬೇರೆ ಇನ್ನೊಂದು ರೀತಿ ಅದಕ್ಕೆ ರಕ್ಷಣೆ ಸಿಕ್ಕು ಎಲ್ಲಾ ಕಲ್ಲಗಳು ಸಾಗಾಣಿಕೆಯಾಗುವಂಥ ಪರಿಸ್ಥಿತಿ ಬರುವಂಥದ್ದನ್ನು ನಾವು ಪತ್ರಿಕೆಯಲ್ಲಿ ಓದುತ್ತಿದ್ದೇವೆ. ಯಾರು ಅಪರಾಧಿ ಸ್ಥಾನದಲ್ಲಿ ನಿಂತಿದ್ದರೂ, ಕಲ್ಲು ಸಾಗಾಣಿಕೆಯಲ್ಲಿ ನಿಂತಿದ್ದರೂ ಬಹುಶಃ ಅವರು ನುಸುಳಿಕೊಂಡು ಅವರಿಗೆ ಪರವಾನಿಗೆ ಸಿಗುತ್ತದೆ ಎನ್ನುವಂಥ ಭಯವಾಗುತ್ತಿದೆ. ಪತ್ರಿಕಾ ವರದಿಗಳು ಈ ರೀತಿ ಬರುತ್ತಿವೆ. ಅದಕ್ಕೆ ಸ್ವಲ್ಪ ಬಿಗಿ ತರುವುದಕ್ಕೆ ಹಾಗೂ ಕಾರ್ಯಕಲಾಪ ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ತಾವು ಏನಾದರೂ ವಿಶೇಷ ಗಮನಹರಿಸಬೇಕಾಗಿ ಕೋರಿಕೆ.

ಶ್ರೀ ವಾಟಾಳ್ ನಾಗರಾಜ್ : ಸಮಿತಿಯಲ್ಲಿ ನಾನೂ ಕೂಡ ಒಬ್ಬ ಸದಸ್ಯನಾಗಿದ್ದೇನೆ. ಸಮಿತಿಯ ವರದಿ ಬರುವುದಕ್ಕೆ ಮುಂಚೆ ಸಮಿತಿಯಲ್ಲಿ ಏನು ನಡೆದಿದೆ ಎಂದು ಹೇಳತಕ್ಕಂಥದ್ದು ಅಪಕೃತ. ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಚಾರಗಳು ಬೇರೆ. ಅದರಲ್ಲಿ ಏನು ಬಂದಿದೆ, ಬಿಟ್ಟಿದೆ ಅದನ್ನು ನಾನು ಸಮರ್ಥನೆ ಮಾಡುವುದಾಗಲಿ, ಸರಿಯಿಲ್ಲವೆಂದು ಹೇಳುವುದಕ್ಕಾಗಲಿ ಹೋಗುವುದಿಲ್ಲ ಮಾರ್ಚ್‌ವರೆಗೆ ಏಕೆ? ತಮಗೆ ನಾವು ಒಂದು ಪತ್ರವನ್ನು ಬರೆದಿದ್ದೇವೆ. ಸಂಬಂಧಪಟ್ಟ ಸಚಿವರನ್ನು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿಂದಿನ ಅಧಿಕಾರಿಯನ್ನು ಕರೆಯಿಸಿ. ಅದು ಇಷ್ಟರಲ್ಲೇ ನಿಂತಿದೆ. ಕರೆಯಿಸಿದರೆ ಸಮಗ್ರವಾದ ಚರ್ಚೆಯಾಗುತ್ತದೆ ಎನ್ನತಕ್ಕಂಥ ಸದುದ್ದೇಶವಿದೆ ಸಮಗ್ರವಾಗಿ ವರದಿಯನ್ನು ಕೊಡಬೇಕಾದರೆ ಸಮಗ್ರವಾಗಿ ಚರ್ಚೆಯಾಗಬೇಕು ಎನ್ನುವ ಒಂದು ಉದ್ದೇಶ ಬಿಟ್ಟರೆ ಇದರಲ್ಲಿ ಬೇರೆ ಯಾವುದೇ ಮಹತ್ವವಿಲ್ಲ, ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರಾದ ನಾಗರಾಜರವರು ಪ್ರಸ್ತಾಪ ಮಾಡಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, ಅದನ್ನು ಕಂಡುಹಿಡಿದ ಅಧಿಕಾರಿ ಮದನಗೋಪಾಲ್‌ರವರಿಗೆ ಎಲ್ಲೇ ವರ್ಗಾವಣೆಯಾಗರಲಿ ಅವರು ಸಮಿತಿ ಮುಂದೆ ಬಂದು ಕೇಳಿದಾಗ ಬೇಕಾದ ದಾಖಲೆಗಳನ್ನು ಕೊಡುವುದು, ಅವರ ಹೇಳಿಕೆಯನ್ನು ಕೊಡತಕ್ಕಂಥದ್ದು ಅತ್ಯಂತ ಅಗತ್ಯ ಇದೆ. ಸತ್ಯ ಸಂಗತಿ ಬಯಲಾಗಬೇಕಾದರೆ, ಸರಿಯಾದಂಥ ವರದಿಗಾಗಿ ಅವರನ್ನು ಕರೆಯಿಸಿ ವಿವರಗಳನ್ನು ತೆಗೆದುಕೊಳ್ಳುವುದು ತುಂಬಾ ಅಗತ್ಯ ಇದೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈ ಯಾವುದೇ ವಿಚಾರ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಸಂದರ್ಭದಲ್ಲಿ ಅದರ ಮೇಲೆ ಉಹಾಪೋಹಗಳು ನಡೆದಿರಬಹುದು. ಈ ತರಹ ಆಗಿರತಕ್ಕಂಥ ವರದಿಗಳಿಂದಾಗಿ ಸಮಿತಿಯು ಅತ್ಯಂತ ಜಾಗರೂಕತೆಯಾಗಿ ಮತ್ತು ಜವಾಬ್ದಾರಿಯಿಂದ ತನ್ನ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಆ ಕಾರಣಕ್ಕಾಗಿ ಸಂಬಂಧಪಟ್ಟ ಎಲ್ಲರನ್ನು ಕರೆಯಿಸಿ ವಿಚಾರ ಮಾಡಬೇಕು ಎನ್ನತಕ್ಕಂಥದ್ದು ಚರ್ಚೆ ಮಟ್ಟಿಲ್ಲಿ ಇದೆ. ತಮಗೆಲ್ಲ ಗೊತ್ತಿದ್ದಂತೆ ಅನೇಕ ಸಂದರ್ಭಗಳಲ್ಲಿ ತಾವು ಅನೇಕ ಸದನದ ಸಮಿತಿಗಳಲ್ಲಿ ಭಾಗವಹಿಸಿದ್ದೀರಿ, ಕೆಲಸವನ್ನು ನಿರ್ವಹಿಸಿದ್ದೀರಿ, ಭಿನ್ನಾಭಿಪ್ರಾಯಗಳು ಇರುತ್ತವೆ ಎಂದರೆ ಅಭಿಪ್ರಾಯಗಳ ವ್ಯತ್ಯಾಸಗಳು ಇರುತ್ತವೆ ವಿನಹ ಅಲ್ಲಿ ಏನೋ ಕೋಲಾಹಲದ ಪ್ರಕರಣ ಆಗಿದೆ ಎನ್ನತಕ್ಕಂಥ ಮಾತಲ್ಲ. ಇದರ ಜೊತೆಗೆ ವಿಧಾನಪರಿಷತ್ತು ಒಂದು ತಿಂಗಳ ಅವಧಿಯನ್ನು ವಿಸ್ತರಣೆ ಮಾಡಲು ಈಗಾಗಲೇ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಆ ಸಂದರ್ಭದಲ್ಲಿ ವಿಧಾನ ಪರಿಷತ್ತು ಒಪ್ಪಿಗೆ ಕೊಟ್ಟಿರತಕ್ಕಂಥದ್ದಕ್ಕಾಗಿ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ ಮತ್ತು ಸದಸ್ಯರು ವ್ಯಕ್ತ ಮಾಡಿದ ಕಳಕಳಿಯ ಬಗ್ಗೆ ಸಮಿತಿಕೂಡ ನೋಡುತ್ತದೆ. ಈ ಸಮಿತಿಯು ವಿಧಾನ ಸಭೆಯ ಒಂದು ಸಣ್ಣದಾಗಿರತಕ್ಕಂಥ ಅಂಗ ಅಲ್ಲ ಇದೂ ಕೂಡ ವಿಧಾನ ಸಭೆಯಾಗಿಯೇ ತನ್ನ ಕೆಲಸವನ್ನು ನಿರ್ವಹಿಸುತ್ತದೆ. ಆ ಕಾರಣಕ್ಕಾಗಿ ದಯವಿಟ್ಟು ತಾವು ಒಪ್ಪಿಗೆಯನ್ನು ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು : ಈ ವಿಷಯದ ಬಗ್ಗೆ ಚರ್ಚೆ ಅನಾವಶ್ಯಕ. ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾದ ತನಿಖೆಯನ್ನು ನಡೆಸಿ ಸದನಕ್ಕೆ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 1996ನೇ ಮಾರ್ಚ ಅಂತ್ಯದವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ವರದಿಯನ್ನೊಪ್ಪಿಸುವುದು

ಶ್ರೀ ಡಿ. ನಾರಾಯಣದಾಸ್ (ಸದಸ್ಯರು, ಕಂದಾಯ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೇ, ಕಂದಾಯ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖಾ ವಿಷಯ ಸಮತಿಯು ಬೀದರಜಿಲ್ಲೆ ಕೊಳಾರ ಕೈಗಾರಿಕಾ ವಲಯದಲ್ಲಿರುವ ರಾಸಾಯನಿಕ ಕೈಗಾರಿಕೆಗಳಿಂದ ಉಂಟಾಗುವ ಮಾಲಿನ್ಯದ ಬಗ್ಗೆ ತಯಾರಿಸಿದ ಮಧ್ಯಂತರ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

(1) ಮಲೆನಾಡು ಅಭಿವೃದ್ಧಿ ಮಂಡಲಿ ಹಾಗೂ ಹೈದ್ರಬಾದ್ ಡೆವಲಪಮೆಂಟ್ ಬೋರ್ಡಗಳಲ್ಲಿ ಇಲಾಖೆಗಳ ಜೊತೆ ಸಮರಸ್ಯವಿಲ್ಲದೆ ಕೆಲಸ ಸ್ಥಗಿತ

+ಶ್ರೀ ಬಿ.ಎಸ್. ಯಡಿಯೂರಪ್ಪ : ಮಲೆನಾಡು ಅಭಿವೃದ್ಧಿ ಮಂಡಲಿ ಹಾಗೂ ಹೈದ್ರಾಬಾದ್ ಡೆವಲಪಮೆಂಟ್ ಬೋರ್ಡ ಇವೆರಡರ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಗೋವಿಂದೇಗೌಡರು ಇಲ್ಲಿದ್ದಾರೆ. ಪ್ರಸ್ತತ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಈ ಮಂಡಲಿ ತನ್ನ ಹಣವನ್ನು ಖರ್ಚು ಮಾಡುವಂಥ ಸಂದರ್ಭದಲ್ಲಿ ಈ ಅಸಿಸ್ಟಂಟ್ ಕಂಟ್ರೋಲರ್ ಲೋಕಲ್ ಅಡಿಟ್ ಸರ್ಕಲ್ ಈ ಇಲಾಖೆ ಮುಖಾಂತರ ಹಣವನ್ನು ಖರ್ಚು ಮಾಡಬೇಕು ಎನ್ನತಕ್ಕಂಥ ನಿಯಮವನ್ನು ತಾವು ಅನುಸರಿಸಿಕೊಂಡು ಹೋಗುತ್ತಿದ್ದೀರಿ. ಈಗ ಕಳೆದ ನಾಲ್ಕೈದು ವರ್ಷಗಳಿಂದ ನಾವು ನೋಡುತ್ತಿದ್ದೇವೆ ಈ ಅಭಿವೃದ್ಧಿ ಮಂಡಲಿಗೆ ಈ ಸರ್ಕಾರಿ ಇಲಾಖೆಗಳ ಮಧ್ಯೆ ಸರಿಯಾದ ಸಂಬಂಧ ಇಲ್ಲದೆ ಈ ಅನುಷ್ಠಾನ ಅಧಿಕಾರಿಗಳು ಸರಿಯಾದಂಥ ಗಮನವನ್ನು ಕೊಡದೆ ಈ ಮಲೆನಾಡು ಅಭಿವೃದ್ಧಿಗೆ ಆಗಬೇಕಾದಂಥ ಕಾಮಗಾರಿಗಳು ಸ್ಥಗಿತ ಆಗುತ್ತಿರುವಂಥದ್ದು, ಸರಿಯಾದ ರೀತಿಯಾದಂಥ ಪ್ರಗತಿಯಾಗದೇ ಇರುವಂಥ ಒಂದು ವಿಚಿತ್ರವಾದಂಥ ಸಂಗತಿಯನ್ನು ನಾವು ಎದುರಿಸುತ್ತಿದ್ದೇವೆ. ಮಲೆನಾಡು ಅಭಿವೃದ್ಧಿಯು 6.10.1995ರ ಸಭೆಯಲ್ಲಿ ಎಲ್ಲಾ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ಮಂಡಲಿಯ ಸೆಕ್ಷನ್ 11(ಎ)ಗೆ ತಿದ್ದುಪಡಿಯನ್ನು ತರಬೇಕೆಂದು ಸರ್ವಾನುಮತದಿಂದ ತೀರ್ಮಾನ ಮಾಡಿದ್ದೇವೆ. ಆಗ ಈ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ ಆಗಲಿ, ಮಲೆನಾಡು ಅಭಿವೃದ್ಧಿ ಮಂಡಲಿಯಾಗಲಿ ಸ್ವತಂತ್ರವಾಗಿ ಹಣವನ್ನು ನೇರವಾಗಿ